# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶಗೌಡ ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಉತ್ತರ

**ವಿಷಯ:-**

ರಾಜ್ಯದಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುತ್ತಿರುವುದು ಅವ್ಯಹತವಾಗಿ ನಡೆಯುತ್ತಾ ಬಂದಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ತೈಲಗೆರೆ ಗ್ರಾಮದ ಗೋಮಾಳ ಸರ್ವೆ ನಂ.110ರಲ್ಲಿ ಹಾಗೂ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂ.60ರಲ್ಲಿ ಇರುವ ಸರ್ಕಾರಿ ಸ್ವತ್ತನ್ನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಅಕ್ರಮವಾಗಿ ಸರ್ಕಾರದ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ.

ಇದರೊಂದಿಗೆ ಇವರುಗಳು ಅಕ್ರಮ ಮರುಳು ದಂಧೆ (ಫಿಲ್ಟರ್ ಮರಳು ದಂಧೆ) ಕಲ್ಲು ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಈ ಅಕ್ರಮ ವ್ಯವಹಾರವು ನೂರಾರು ಕೋಟಿಗಳಿಂದ ಕೂಡಿದ್ದು, ಸರಿಸುಮಾರು 10 ರಿಂದ 20 ಖಾಸಗಿ ಸರ್ವೆ ನಂಬರುಗಳನ್ನು ಒಳಗೊಂಡಿರುತ್ತದೆ. ಇದರ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಈ ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿದ್ದರ ಪರಿಣಾಮ ಸರ್ವೆ ನಂ.110ರಲ್ಲಿ ಅತ್ಯಲ್ಪ ದಂಡ ವಿಧಿಸಿದ್ದು, ಇವರಿಗೆ ಇನ್ನೂ ಕುಮ್ಮಕ್ಕು ಕೊಟ್ಟಿದಂತಿರುತ್ತದೆ. ಈ ವಿಷಯವಾಗಿ ಈ ಹಿಂದೆ ಸದನದಲ್ಲಿ ಪ್ರಸ್ತಾಪಿಸಿದ್ದರೂ ಸಹ ಸರ್ಕಾರವು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಈ ಮೇಲ್ಕಂಡ ಸರ್ಕಾರಿ ಸ್ವತ್ತು ಅಕ್ರಮವಾಗಿ ಕಬಳಿಕೆ ಮಾಡಿರುವ ಸರ್ಕಾರಿ ಸ್ವತ್ತನ್ನು ರಕ್ಷಿಸಿ ಮುಟ್ಟುಗೋಲು ಹಾಕಿಕೊಂಡು ಇದಕ್ಕೆ ಕಾರಣಕರ್ತರಾದ ಎಲ್ಲರಿಗೂ ಸೂಕ್ತ ಕಾನೂನು ರೀತಿ ಶಿಕ್ಷೆಯನ್ನು ನೀಡುವುದರೊಂದಿಗೆ ಸರ್ಕಾರಿ ಜಮೀನನ್ನು ರಕ್ಷಿಸಬೇಕೆಂದು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿಯ ತೈಲಗೆರೆ ಗ್ರಾಮದ ಸ.ನಂ.110 ಸರ್ಕಾರಿ ಗೋಮಾಳ ಎಂದು ವರ್ಗೀಕೃತವಾಗಿರುತ್ತದೆ. ಆಕಾರ್‌ಬಂದ್‌ನಂತೆ 211-16 ಎಕರೆ ಗುಂಟೆ ಜಮೀನಿದ್ದು, ಚಾಲ್ತಿ ಸಾಲಿನ ಪಹಣಿಯನ್ನು ಪರಿಶೀಲಿಸಲಾಗಿ ಸದರಿ ಸರ್ವೆ ನಂಬರಿನಲ್ಲಿ 136-30 ಎಕರೆ/ಗುಂಟೆ ಜಮೀನು ಹಲವಾರು ಜನರ ಹೆಸರಿನಲ್ಲಿ ಖಾತೆ ದಾಖಲಾಗಿರುವುದು ಕಂಡುಬಂದಿರುತ್ತದೆ. ಈ ಪಹಣಿಯಲ್ಲಿ ನಮೂದಾಗಿರುವ ಖಾತೆದಾರರುಗಳ ಪೈಕಿ 102-28½ ಎಕರೆ/ಗುಂಟೆ ಮಂಜೂರಾತಿ ಬಗ್ಗೆ ದಾಖಲೆಗಳು ಇಲ್ಲವಾದ ಕಾರಣ ಮಂಜೂರಾತಿ ನೈಜತೆಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯಿದೆ, 1964 ಕಲಂ 136(3) ರಡಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣದ ಸಂಖ್ಯೆ:ಆರ್.ಪಿ.160 ರಿಂದ 195/2013 ರವರೆಗೆ ಒಟ್ಟು 36 ಪ್ರಕರಣಗಳು ದಾಖಲಾಗಿದ್ದು, ವಿಚಾರಣಾ ಹಂತದಲ್ಲಿರುತ್ತದೆ. ಸದರಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಲಾಗುವುದು.

ಸೊಣ್ಣೇನಹಳ್ಳಿ ಗ್ರಾಮದ ಸ.ನಂ.60ರಲ್ಲಿ ಆಕಾರ್‌ಬಂದ್‌ನಂತೆ 22-34 ಎಕರೆ/ಗುಂಟೆ ಗೋಮಾಳ ಜಮೀನು ಇರುತ್ತದೆ. ತಹಶೀಲ್ದಾರ್‌ರವರ ಕಡತ ಸಂ.ಎಲ್ಎನ್‌ಡಿ.ಆರ್‌ಯುಸಿ.ಎಸ್‌ಆರ್.304/2001-02ರಂತೆ ಒಟ್ಟು 15 ಜನರಿಗೆ 16-03 ಎಕರೆ/ಗುಂಟೆ ಜಮೀನು ಮಂಜೂರಾಗಿರುವ ಬಗ್ಗೆ ಅಧಿಕೃತ ಜ್ಞಾಪನದಲ್ಲಿ ನಮೂದಾಗಿರುತ್ತದೆ. ಅದರಲ್ಲಿ ಕ್ರಮ ಸಂ.15ರಲ್ಲಿ ನಮೂದಾಗಿರುವ ಶ್ರೀ ಸೊಣ್ಣಪ್ಪ ಬಿನ್ ಅಪ್ಪಯ್ಯ ರವರ ಹೆಸರು ಅನುಮಾನಸ್ಪದವಾಗಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 136(3)ರಡಿ ತಹಶೀಲ್ದಾರರ ವರದಿಯ ಮೇಲೆ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸಿ ಆರ್‌ಪಿ.154/2014-15 ದಿನಾಂಕ:08.08.2016ರಂತೆ ಆದೇಶ ಹೊರಡಿಸಿ ಮೂಲ ಮಂಜೂರಿ ದಾಖಲಾತಿಗಳನ್ನು ಪರಿಶೀಲಿಸಿ, ಅಕ್ರಮ ದಾಖಲೆಗಳೆಂದು ಕಂಡುಬಂದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 108(ಕೆ)ರಡಿಯಲ್ಲಿ ಉಪವಿಭಾಗಾಧಿಕಾರಿಗಳಿಗೆ ವರದಿ ಸಲ್ಲಿಸಲು ತಹಶೀಲ್ದಾರ್, ದೇವನಹಳ್ಳಿ ರವರಿಗೆ ಸೂಚಿಸಿ ಆದೇಶ ಹೊರಡಿಸಲಾಗಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತೈಲಗೆರೆ ಗ್ರಾಮದ ಸ.ನಂ.110ರಲ್ಲಿ ನಿಯಮಾನುಸಾರ 16 ಕಟ್ಟಡ ಕಲ್ಲುಗಣಿ ಗಣಿಗುತ್ತಿಗೆಗಳು ಮಂಜೂರಾಗಿದ್ದು, ಇವುಗಳ ಒಟ್ಟು ವಿಸ್ತೀರ್ಣ 57-36 ಎಕರೆ-ಗುಂಟೆ ಇರುತ್ತದೆ. ಕಲ್ಲುಗಣಿಗುತ್ತಿಗೆದಾರರು ಮಂಜೂರಾಗಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಕಟ್ಟಡ ಕಲ್ಲುಗಣಿಗಾರಿಕೆ ನಡೆಸುತ್ತಿದ್ದು, ಗುತ್ತಿಗೆದಾರರು ಉಪಖನಿಜ ಸಾಗಾಟ ಸಂಬಂಧ ಇಲಾಖೆಗೆ ರಾಜಧನ, ಡಿಎಂಎಫ್‌ಟಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಿ ಪರವಾನಿಗೆಯನ್ನು ಪಡೆಯುತ್ತಿರುತ್ತಾರೆ. ತೈಲಗೆರೆ ಗ್ರಾಮದ ಸ.ನಂ.110 ರಲ್ಲಿ ಯಾವುದೇ ಅಕ್ರಮ ಕಲ್ಲುಗಣಿಗಾರಿಕೆಗಳು ಇರುವುದಿಲ್ಲ.

ತೈಲಗೆರೆ ವ್ಯಾಪ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆದಾರರು ಇಲಾಖೆಗೆ ರಾಜಧನ, ಡಿಎಂಎಫ್, ಎಪಿಪಿ ಹಾಗೂ ಇತರೆ ಶುಲ್ಕಗಳನ್ನು ಪಾವತಿಸಿ, ಪರವಾನಿಗೆಯನ್ನು ಪಡೆದು ಗುತ್ತಿಗೆ ಪ್ರದೇಶದಿಂದ ಉಪಖನಿಜವನ್ನು ಉತ್ಪಾದನೆ ಮಾಡಿ ಸಾಗಾಟ ಮಾಡುತ್ತಿರುತ್ತಾರೆ. ವಿವರಗಳು ಈ ಕೆಳಕಂಡಂತಿವೆ:

- ಜಿಲ್ಲೆ ವ್ಯಾಪ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳಿಂದ 2020-21 ನೇ ಸಾಲಿನಲ್ಲಿ ರಾಜಧನ ರೂ.24,15,75,088/-ಗಳು ಹಾಗೂ ಡಿ.ಎಂ.ಎಫ್ ರೂ. 7,03,77,293/-ಗಳು ಸೇರಿ ಒಟ್ಟು ಮೊತ್ತ ರೂ. 31,19,52,381/-ಗಳನ್ನು ಸಂಗ್ರಹಿಸಲಾಗಿರುತ್ತದೆ. ಇದರಲ್ಲಿ ತೈಲಗೆರೆ ಗ್ರಾಮದ ಕಲ್ಲುಗಣಿ ಗುತ್ತಿಗೆಗಳಿಂದ ರೂ.11,50,90,167/-ಗಳು/-ಗಳ ರಾಜಧನ ಹಾಗೂ ರೂ.3,45,27,050/-ಗಳು ಡಿ.ಎಂ.ಎಫ್ ಒಟ್ಟು ರೂ.14,96,17,217/-ಗಳ ಮೊತ್ತವನ್ನು ಸಂಗ್ರಹಿಸಲಾಗಿರುತ್ತದೆ.

- 2021-22ನೇ ಸಾಲಿನ ಫೆಬ್ರುವರಿ-2022ರ ಅಂತ್ಯದವರೆಗೆ ರಾಜಧನ ರೂ.25,55,63,304/-ಗಳು ಹಾಗೂ ಡಿ.ಎಂ.ಎಫ್ ರೂ.8,26,89,943/-ಗಳು ಸೇರಿ ಒಟ್ಟು ಮೊತ್ತ ರೂ.33,82,53,247 /-ಗಳನ್ನು ಸಂಗ್ರಹಿಸಲಾಗಿರುತ್ತದೆ. ಇದರಲ್ಲಿ ತೈಲಗೆರೆ ಗ್ರಾಮದ ಕಲ್ಲುಗಣಿ ಗುತ್ತಿಗೆಗಳಿಂದ ರಾಜಧನ ರೂ.10,27,30,570/-ಗಳು ಹಾಗೂ ಡಿ.ಎಂ.ಎಫ್ ರೂ.3,08,9191/-ಗಳು ಡಿ.ಎಂ.ಎಫ್ ಮೊತ್ತ ಒಟ್ಟು ರೂ10,58,19,74/- ಗಳನ್ನು ಸಂಗ್ರಹಿಸಲಾಗಿರುತ್ತದೆ.

ಮುಂದುವರೆದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ಕುಂದಾಣ ಹೋಬಳಿ ತೈಲಗೆರೆ ಗ್ರಾಮದ ಸಂ.ನಂ.110 ರ ಸರ್ಕಾರಿ ಜಮೀನಿನಲ್ಲಿ ಪಿಲ್ಲರ್ ಮರಳು ತಯಾರಿಸುವ ಸಂಬಂಧ ಅಕ್ರಮವಾಗಿ ಮಣ್ಣನ್ನು ತೆಗೆದು ಸಾಗಾಟ ಮಾಡಿರುವ ಬಗ್ಗೆ ದಿನಾಂಕ:29.05.2021 ರಂದು ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರೊಂದಿಗೆ ಚರ್ಚಿಸಿದ್ದು, ಈ ಬಗ್ಗೆ ಮತ್ತೊಮ್ಮೆ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಲು ತಹಶೀಲ್ದಾರ್ ಹಾಗೂ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರಿಗೆ ಸೂಚಿಸಲಾಗಿರುತ್ತದೆ.

ಅದರಂತೆ ದಿನಾಂಕ:31.05.2021 ರಂದು ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ತಾಂತ್ರಿಕ ಅಧಿಕಾರಿಗಳು, ರಾಜಸ್ವ ನಿರೀಕ್ಷಕರು, ಕುಂದಾಣ ಹೋಬಳಿ, ಗ್ರಾಮ ಲೆಕ್ಕಾಧಿಕಾರಿಗಳು, ಗ್ರಾಮ ಸೇವಕರೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದ್ದು, ಸ್ಥಳ ಪರಿಶೀಲನೆ ಸಮಯದಲ್ಲಿ ತೈಲಗೆರೆ ಗ್ರಾಮದ ಸ.ನಂ.110 ರಲ್ಲಿನ ಸರ್ಕಾರಿ ಜಾಗದಲ್ಲಿ 2008-09 ರಿಂದ 2013-14ನೇ ಸಾಲಿನಲ್ಲಿ ಅಕ್ರಮವಾಗಿ ಪಿಲ್ಲರ್ ಮರಳು ಗಣಿಗಾರಿಕೆ ಸಂಬಂಧ ಮಣ್ಣನ್ನು (ಮರ್ರಂ) ತೆಗೆದು ಸಾಗಾಣಿಕೆ ಮಾಡಿರುವುದು ಹಾಗೂ ಸದರಿ ಪ್ರದೇಶದಲ್ಲಿ ಹೊಂಡಾ (ಗುಂಡಿ) ನಿರ್ಮಾಣವಾಗಿರುವುದು ಕಂಡುಬಂದಿದ್ದು, ಮಣ್ಣು (ಮರ್ರಂ) ತೆಗೆದಿರುವ ಪ್ರದೇಶವನ್ನು ಹೊಂಡಾ(ಗುಂಡಿ)ವನ್ನು ಜಿಪಿಎಸ್ ಉಪಕರಣದಿಂದ ಟ್ರಾಕ್ ಮಾಡಿದ್ದು, ಇದರ ಒಟ್ಟು ವಿಸ್ತೀರ್ಣ ಮತ್ತು ಗಣಿಗಾರಿಕೆಯ ಆಳವನ್ನು ಟೇಪ್‌ನಿಂದ ಅಳತೆ ಮಾಡಿ ಸರಾಸರಿಯಾಗಿ ಅಂದಾಜಿಸಿದ್ದು, ಈ ಅಳತೆಯ ಪ್ರಕಾರ ತೈಲಗೆರೆ ಗ್ರಾಮದ ಸ.ನಂ. 110 ರಲ್ಲಿನ ಪೂರ್ವ ದಿಕ್ಕಿನಲ್ಲಿ ಸುಮಾರು 6-7 ವರ್ಷಗಳ ಹಿಂದೆ ಅಕ್ರಮವಾಗಿ ಪಿಲ್ಲರ್ ಮರಳು ಗಣಿಗಾರಿಕೆ ನಡೆಸುವ ಸಂಬಂಧ ಮಣ್ಣನ್ನು (ಮರ್ರಂ) ತೆಗೆದು ಸಾಗಾಣಿಕೆ ಮಾಡಿರುವ ಕುರುಹುಗಳಿದ್ದು ಮತ್ತು ಸದರಿ ಪ್ರದೇಶದಲ್ಲಿ ಕುರುಚಲು ಗಿಡ ಮತ್ತು ಮರಗಳು ಬೆಳೆದಿರುವುದು ಕಂಡುಬಂದಿರುತ್ತದೆ.

..3..

ಮಣ್ಣು(ಮರ್ರಂ) ತೆಗೆದು ಉಂಟಾಗಿರುವ ಹೊಂಡಾ(ಗುಂಡಿ)ದ ವಿಸ್ತೀರ್ಣ ಒಟ್ಟು 12-00 ಎಕರೆ ಇದ್ದು, ಸರಾಸರಿ 6.0 ಮೀ. ಆಳದವರೆಗೆ ಗಣಿಗಾರಿಕೆ ಮಾಡಿ ಸಾಗಾಣಿಕೆ ಮಾಡಿರುವುದು ಕಂಡುಬಂದಿರುವುದಾಗಿ ಹಾಗೂ ಸದರಿ ಪ್ರದೇಶದಲ್ಲಿ 4,37,076 ಮೆ.ಟನ್ ಪ್ರಮಾಣದಷ್ಟು ಮಣ್ಣು (ಮರ್ರಂ) ಗಣಿಗಾರಿಕೆ ಮಾಡಿ ಪಿಲ್ಲರ್ ಮರಳು ತಯಾರಿಸುವ ಸಂಬಂಧ ಸಾಗಾಣಿಕೆ ಮಾಡಿರುವುದಾಗಿ ವರದಿಯಾಗಿರುತ್ತದೆ. ಅದರನ್ವಯ 4,37,076 ಮೆ.ಟನ್ ಪ್ರಮಾಣಕ್ಕೆ (10 ರೂ ರಾಜಧನದಂತೆ) ಒಟ್ಟು ರಾಜಧನ ರೂ.43,70,760/-ಗಳಾಗಿದ್ದು, ಇದರ ಐದು ಪಟ್ಟು ದಂಡ ವಿಧಿಸಿದಾಗ ಇದರ ಒಟ್ಟು ರಾಜಧನ ಮೊತ್ತ ರೂ.2,18,53,800/-ಗಳಾಗಿರುತ್ತದೆ. ತೈಲಗೆರೆ ಗ್ರಾಮದ ಸ.ನಂ.110 ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳ ವ್ಯಾಪ್ತಿಯಲ್ಲಿ ಅಕ್ರಮವಾಗಿ ಪಿಲ್ಲರ್ ಮರಳು ಸಾಗಾಣಿಕೆ ನಡೆಸಿರುವವರ ವಿರುದ್ಧ 2008-09 ರಿಂದ 2013-14 ರವರೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ 19 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತವೆ.

ದಿನಾಂಕ:29.06.2021 ರಂದು ಸದರಿ ವಿಷಯದ ಕುರಿತು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಸಭೆ ನಡೆದಿದ್ದು, ತೈಲಗೆರೆ ಗ್ರಾಮದ ಸಂ.ನಂ.110 ರ ಸರ್ಕಾರಿ ಜಮೀನಿನಲ್ಲಿ ಪಿಲ್ಲರ್ ಮರಳು ತಯಾರಿಸುವ ಸಂಬಂಧ ಅಕ್ರಮವಾಗಿ ಮಣ್ಣನ್ನು ತೆಗೆದು ಸಾಗಾಟ ಮಾಡಿ ಸರ್ಕಾರದ ಜಾಗದಲ್ಲಿ ಹೊಂಡಗಳನ್ನು ನಿರ್ಮಾಣ ಮಾಡಿ, ಸರ್ಕಾರದ ಬೊಕ್ಕಸಕ್ಕೆ ರೂ.43,70,760/-ಗಳಷ್ಟು ನಷ್ಟ ಮಾಡಿರುವುದರಿಂದ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮಗಳನ್ವಯ ರಾಜಧನದ ಐದುಪಟ್ಟು ರೂ.2,18,53,800/-ಗಳ ದಂಡವನ್ನು ಈ ಹಿಂದೆ ಪಿಲ್ಲರ್ ಮರಳು ಸಾಗಾಣಿಕೆ ಮಾಡಿರುವವರಿಂದ ದಂಡ ವಸೂಲಿ ಮಾಡುವ ಕುರಿತು ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ರವರು ಕ್ರಮ ವಹಿಸುವ ಬಗ್ಗೆ ನಡವಳಿಗಳನ್ವಯ ತೀರ್ಮಾನಿಸಲಾಗಿದೆ.

ಸದರಿ ಆದೇಶದನ್ವಯ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ರವರು ತೈಲಗೆರೆ ಗ್ರಾಮದ ಸಂ.ನಂ.110 ರ ಸರ್ಕಾರಿ ಜಮೀನಿನಲ್ಲಿ ಪಿಲ್ಲರ್ ಮರಳು ತಯಾರಿಸುವ ಸಂಬಂಧ ಅಕ್ರಮವಾಗಿ ಮಣ್ಣನ್ನು ತೆಗೆದು ಸಾಗಾಟ ಮಾಡಿರುವ ಶ್ರೀ.ಹೆಚ್.ಎಸ್.ಶಿವಕುಮಾರ್ ಬಿನ್ ಸೊಣ್ಣಪ್ಪ ಮತ್ತು ಸಹೋದರರು, ಹೆಣ್ಣೂರು ಗ್ರಾಮ, ಬೆಂಗಳೂರು ನಗರ ಜಿಲ್ಲೆ ರವರಿಂದ ಕಂದಾಯ ಬಾಕಿಯಂತೆ ವಸೂಲಿ ಮಾಡಿದ ಹಣವನ್ನು 0853 NFM & MI 00-102-1-05 Royalty on Minor Minerals" ಎಂಬ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ರಾಜಸ್ವ ನಿರೀಕ್ಷಕರು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು ರವರಿಗೆ ಸೂಚಿಸಲಾಗಿರುತ್ತದೆ.

ಮುಂದುವರೆದು, ಸದರಿ ಪ್ರದೇಶದ ಸುತ್ತ-ಮುತ್ತ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆ ನಡೆಯದಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕರು ಹಾಗೂ ತಾಂತ್ರಿಕ ಅಧಿಕಾರಿಗಳು ಆಗಿಂದಾಗ್ಗೆ ಸ್ಥಳ ಪರಿಶೀಲನೆ ನಡೆಸುತ್ತಿರುತ್ತಾರೆ.

**(ಆರ್. ಅಶೋಕ)**
ಕಂದಾಯ ಸಚಿವರು

ಕಂಇ 80 ಟಿಆರ್‌ಎಂ 2022